ಅನುಮೋದನೆ ಪಡೆಯುವುದು ಕಡ್ಡಾಯವೆಂದು ಮಾಡಿರುವ ಆದೇಶ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ರೈತರಿಗೆ ತೊಂದರೆಯಾಗದಂತೆ ಸದರಿ ನಿಯಮವನ್ನು ಬದಲಿಸಿ ತಾಲ್ಲೂಕು ಮಟ್ಟದ ಅಧಿಕಾರಿಗೆ ಪರಿವರ್ತನಾ ಆದೇಶ ನೀಡುವ ನಿಯಮವನ್ನು ಜಾರಿಗೆ ತರಲಾಗುವುದೇ?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಭೂಕಂದಾಯ ಕಾಯಿದೆ 1964ರ ಕಲಂ 95ರಡಿ ಭೂ ಪರಿವರ್ತನೆ ಮಾಡುವ ಅಧಿಕಾರ ಜಿಲ್ಲಾಧಿಕಾರಿಯವರಿಗೆ ನೀಡಿದ್ದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಟ್ಟಡಗಳು, ಬಾವಿ ಮತ್ತು ಕೆರೆ ನಿರ್ಮಾಣ ಮಾಡುವ ಉದ್ದೇಶಕ್ಕೆ ತಹಶೀಲ್ದಾರರಿಗೆ ನಿಗದಿತ ಶುಲ್ಕ ಪಾವತಿಸಿ ಭೂ ಪರಿವರ್ತನೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಭೂಸುಧಾರಣೆ ಕಾಯಿದೆ ಅಡಿ ಜಮೀನು ಪಡೆದವರಿಗೆ ಭೂ ಪರಿವರ್ತನೆ ಮಾಡಿಸಿಕೊಳ್ಳಲು ತಹಶೀಲ್ದಾರರಿಗೆ ಭೂ ಕಂದಾಯ ಕಾಯಿದೆಯಲ್ಲಿ ಯಾವುದೇ ಅಧಿಕಾರ ನೀಡಿರುವುದಿಲ್ಲ.

ಆ) ಈ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

ಮಾಜಿ ಪಟೇಲರುಗಳ ಮಾಹಿತಿ

90 (131) ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕರ್ನಾಟಕ ಗ್ರಾಮಾಧಿಕಾರಿಗಳ ರದ್ದತಿ ಕಾಯ್ದೆ (1963) ರನ್ವಯದ ಪರಿಣಾಮವಾಗಿ ಅನುವಂಶಿಕ ಹಕ್ಕು ಅಧಿಕಾರ ಕಳೆದುಕೊಂಡ ಪಟೇಲರುಗಳ ಸಂಖ್ಯೆ ಎಷ್ಟು?

ಆ) ಮಾಜಿ ಪಟೇಲರುಗಳಿಗೆ ನೀಡುತ್ತಿರುವ ಮಾಸಿಕ ಪಿಂಚಣಿ (ಅನುಕಂಪ ಭತ್ಯೆ) ಮೊತ್ತ ಎಷ್ಟು?

ಇ) ಅನುಕಂಪ ಭತ್ಯೆಯನ್ನು ಯಾವ ಲೆಕ್ಕಶೀರ್ಷಿಕೆಯಿಂದ ನೀಡಲಾಗುತ್ತಿದೆ?

ಈ) ಅನುಕಂಪ ಭತ್ಯೆಯನ್ನು ಯಾವ ತಿಂಗಳಿನಿಂದ ನೀಡಲಾಗಿರುವುದಿಲ್ಲ, ಇದಕ್ಕೆ ಕಾರಣಗಳೇನು?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) 9827 (ಒಂಭತ್ತು ಸಾವಿರದ ಎಂಟು ನೂರ ಇಪ್ಪತ್ತೇಳು).

ಆ) ಅಕ್ಟೋಬರ್ 2008 ರವರೆಗೆ ಪ್ರತಿ ತಿಂಗಳು, ಪ್ರತಿಯೊಬ್ಬರಿಗೆ ರೂ. 500/– ರಂತೆ ಹಾಗೂ ನವೆಂಬರ್ 2008 ರಿಂದ ಪ್ರತಿ ತಿಂಗಳು, ಪ್ರತಿಯೊಬ್ಬರಿಗೆ ರೂ. 1000/– ರಂತೆ ಮಾಸಿಕ ಪಿಂಚಣಿ ನೀಡಲಾಗುತ್ತಿದೆ.

ಇ) ಲೆಕ್ಕ ಶೀರ್ಷಿಕೆ 2029–00–101–1–01–015 ರಡಿ ನೀಡಲಾಗಿದೆ.

ಈ) ಅನುದಾನ ಕೊರತೆಯಿಂದಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನವೆಂಬರ್ 2008 ರಿಂದ ಅನ್ವಯವಾಗುವಂತೆ ನೀಡಬೇಕಾಗಿದ್ದ 1000/– ರೂ. ಮಾಸಿಕ ಪಿಂಚಣಿ ಬದಲು ರೂ. 500/– ರಂತೆ ಪಿಂಚಣಿ ಪಾವತಿಸಲಾಗುತ್ತಿದೆ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗಳು ವರದಿ ಮಾಡಿರುತ್ತಾರೆ. ಆರ್ಥಿಕ ಇಲಾಖೆಗೆ ಅನುದಾನ ಬಿಡುಗಡೆ ಮಾಡಲು ಕೋರಿಕೆ ಸಲ್ಲಿಸಿದ್ದು, ಅನುದಾನ ಬಿಡುಗಡೆಯಾದ ತಕ್ಷಣ ಅನುಕಂಪ ಭತ್ಯೆಯನ್ನು ನೀಡಲಾಗುವುದು.

ದೇವನಹಳ್ಳಿ ಕ್ಷೇತ್ರದಲ್ಲಿ ಸಣ್ಣ ಕೆರೆಗಳ ಸರ್ವೆ ಬಗ್ಗೆ

91 (255) ಶ್ರೀ ವೆಂಕಟಸ್ವಾಮಿ (ದೇವನಹಳ್ಳಿ) : ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೇವನಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿರುವ ಸಣ್ಣ ಕೆರೆಗಳ ಸಂಖ್ಯೆ ಎಷ್ಟು? (ಗ್ರಾಮವಾರು ವಿವರ ನೀಡುವುದು);

ಆ) ದೇವನಹಳ್ಳಿ ಕ್ಷೇತ್ರದ ಯಾವ ಯಾವ ಸ್ಥಳಗಳಲ್ಲಿ ಹೊಸ ಕೆರೆಗಳನ್ನು ನಿರ್ಮಿಸುವ ಕುರಿತು ಸರ್ವೆ ಕಾರ್ಯವನ್ನು ನಡೆಸಲಾಗಿದೆ?

ಇ) ಹಾಗಿದ್ದಲ್ಲಿ ಈ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ? ಸಲ್ಲಿಸಿದ್ದಲ್ಲಿ ಸರ್ಕಾರ ಮಂಜೂರಾತಿ ನೀಡಿದೆಯೇ?

ಈ) ಮಂಜೂರಾತಿ ನೀಡಿದಲ್ಲಿ ಈ ಕೆರೆಗಳ ನಿರ್ಮಾಣಕ್ಕಾಗಿ ತಗಲುವ ಅಂದಾಜು ವೆಚ್ಚವೆಷ್ಟು?

ಉ) ಪ್ರಸಕ್ತ ಸಾಲಿನಲ್ಲಿ ಯಾವ ಯಾವ ಗ್ರಾಮಗಳಲ್ಲಿ ಹೊಸದಾಗಿ ಸಣ್ಣ ಕೆರೆಗಳನ್ನು ನಿರ್ಮಾಣ ಮಾಡಲಾಗುವುದು?